# Visit of Minister of State for External Affairs Shri V.Muraleedharan to South Sudan (October 20-22, 2021)

October 25, 2021

## ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಶ್ರೀ ವಿ.ಮುರಳೀಧರನ್ ಅವರ ದಕ್ಷಿಣ ಸುಡಾನ್ ಭೇಟಿ (ಅಕ್ಟೋಬರ್ 20-22, 2021)

ಅಕ್ಟೋಬರ್ 25, 2021

ವಿದೇಶಾಂಗ ವ್ಯವಹಾರಗಳು ಮತ್ತು ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರಾದ ಶ್ರೀ ವಿ. ಮುರಳೀಧರನ್ [ಎಮ್‌ಒಎಸ್ (ವಿಎಮ್)] ಅವರು 2021 ರ ಅಕ್ಟೋಬರ್ 20-22 ರವರೆಗೆ ಜುಬಾ (ದಕ್ಷಿಣ ಸುಡಾನ್) ನಲ್ಲಿ ಅಧಿಕೃತ ಭೇಟಿಯಲ್ಲಿದ್ದರು. ಐದು ವರ್ಷಗಳ ನಂತರ ದಕ್ಷಿಣ ಸುಡಾನ್‌ಗೆ ಭಾರತದ ಕಡೆಯಿಂದ ಇದು ಮೊದಲ ಸಚಿವರ ಭೇಟಿಯಾಗಿದೆ.

2. ವಿದೇಶಾಂಗ ವ್ಯವಹಾರಗಳು ಮತ್ತು ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರು ವಿದೇಶಾಂಗ ವ್ಯವಹಾರಗಳು ಮತ್ತು ಅಂತರಾಷ್ಟ್ರೀಯ ಸಹಕಾರ ಸಚಿವ ಗೌರವಾನ್ವಿತ ಶ್ರೀ ಮಾಯಿಕ್ ಅಯಿ ಡೆಂಗ್ ಅವರನ್ನು ಭೇಟಿ ಮಾಡಿದರು. ಎರಡೂ ಕಡೆಯವರು ಅಸ್ತಿತ್ವದಲ್ಲಿರುವ ಸಂಬಂಧಗಳ ಎಲ್ಲಾ ಅಂಶಗಳನ್ನು ಪರಿಶೀಲಿಸಿದರು ಮತ್ತು ಕೃಷಿ, ಜಾನುವಾರು, ಶಿಕ್ಷಣ, ಆರೋಗ್ಯ ಮತ್ತು ಐಟಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಲು ಇಚ್ಛೆಯನ್ನು ವ್ಯಕ್ತಪಡಿಸಿದರು.

3. ವಿಪತ್ತು ಸ್ಥಿತಿಸ್ಥಾಪಕ ಮೂಲಸೌಕರ್ಯ (ಸಿಡಿಆರ್ಐ) ಒಕ್ಕೂಟಕ್ಕೆ ಸೇರಲು ದಕ್ಷಿಣ ಸುಡಾನ್ ಅನ್ನು ಆಹ್ವಾನಿಸಲಾಯಿತು. ದಕ್ಷಿಣ ಸುಡಾನ್‌ನ ಸಂಸದೀಯ ವ್ಯವಹಾರಗಳ ಸಚಿವೆ, ಶ್ರೀಮತಿ ಮೇರಿ ನವಾಯಿ ಮಾರ್ಟಿನ್ ಅವರೊಂದಿಗಿನ ಸಭೆಯಲ್ಲಿ, ಭಾರತವು ದಕ್ಷಿಣ ಸುಡಾನ್‌ನೊಂದಿಗೆ ಸಂಸದೀಯ ಕಾರ್ಯವಿಧಾನಗಳು ಮತ್ತು ಅಭ್ಯಾಸಗಳನ್ನು ಅಭಿವೃದ್ಧಿಪಡಿಸುವಲ್ಲಿ ತನ್ನದೇ ಆದ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ವಿವಿಧ ಸಾಮರ್ಥ್ಯ ವೃದ್ಧಿ ತರಬೇತಿ ಕೋರ್ಸ್‌ಗಳನ್ನು ನೀಡಲು ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದರು.

4. ಈ ಭೇಟಿಯು, ದಕ್ಷಿಣ ಸುಡಾನ್‌ನ ಮೊದಲ ಉಪಾಧ್ಯಕ್ಷ ಗೌರವಾನ್ವಿತ ಡಾ. ರೀಕ್ ಮಚಾರ್ ಟೆನಿ ಧುರ್ಗೋನ್ ಅವರೊಂದಿಗಿನ ಸಭೆಯನ್ನೂ ಒಳಗೊಂಡಿತ್ತು. ವಿದೇಶಾಂಗ ವ್ಯವಹಾರಗಳು ಮತ್ತು ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರು ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಮತ್ತು ಭಾರತೀಯ ಹೂಡಿಕೆಯ ಬೆಳವಣಿಗೆಗೆ ಬಳಕೆಯಾಗದ ಸಾಮರ್ಥ್ಯವನ್ನು ಒತ್ತಿ ಹೇಳಿದರು ಮತ್ತು ದಕ್ಷಿಣ ಸುಡಾನ್‌ನಲ್ಲಿ ಭಾರತೀಯ ಉದ್ಯಮಿಗಳು ಎದುರಿಸುತ್ತಿರುವ ನಿರ್ಬಂಧಗಳ ಬಗ್ಗೆ ತಮ್ಮ ಗಮನ ಸೆಳೆದರು. ಗೌರವಾನ್ವಿತ ಡಾ. ರಿಕ್ ಮಚಾರ್ ಅವರು ದಕ್ಷಿಣ ಸುಡಾನ್‌ನಲ್ಲಿ ಭಾರತೀಯ ಹೂಡಿಕೆದಾರರಿಗೆ ಹೂಡಿಕೆದಾರ ಸ್ನೇಹಿ ವಾತಾವರಣವನ್ನು ಭರವಸೆ ನೀಡಿದರು.

5. ದಕ್ಷಿಣ ಸುಡಾನ್ ಗಣರಾಜ್ಯದ ಅಧ್ಯಕ್ಷರಾದ ಗೌರವಾನ್ವಿತ ಶ್ರೀ ಸಾಲ್ವಾ ಕಿರ್ ಮಯಾರ್ಡಿಟ್ ಅವರೊಂದಿಗೆ ಚರ್ಚೆಯ ಸಂದರ್ಭದಲ್ಲಿ, ದಕ್ಷಿಣ ಸುಡಾನ್‌ನಲ್ಲಿನ (ಆರ್-ಎಆರ್‌ಸಿಎಸ್‌ಎಸ್) ಸಂಘರ್ಷದ ಪರಿಹಾರದ ಪುನರುಜ್ಜೀವನದ ಒಪ್ಪಂದದಲ್ಲಿ ರೂಪಿಸಲಾದ ನಡೆಯುತ್ತಿರುವ ಶಾಂತಿ ಪ್ರಕ್ರಿಯೆಗೆ ಭಾರತದ ಬೆಂಬಲವನ್ನು ಪುನರುಚ್ಚರಿಸಲಾಗಿದೆ. ಅಧ್ಯಕ್ಷ ಸಾಲ್ವಾ ಕಿರ್ ಅವರು ಆರೋಗ್ಯ ಕ್ಷೇತ್ರದಲ್ಲಿ ಭಾರತದ ಸಹಕಾರವನ್ನು ಕೋರಿದರು ಮತ್ತು ದಕ್ಷಿಣ ಸುಡಾನ್‌ನಲ್ಲಿ ವಾಸಿಸುವ ಭಾರತೀಯ ಸಮುದಾಯದ ದೀರ್ಘಾವಧಿಯ ಬೇಡಿಕೆಗಳನ್ನು ಪರಿಗಣಿಸಿ, ಹಿಂದೂ ಸ್ಮಶಾನ ಭೂಮಿ ಮತ್ತು ಜುಬಾದಲ್ಲಿ

ದೇವಾಲಯಕ್ಕಾಗಿ ಭೂಮಿಯನ್ನು ಮಂಜೂರು ಮಾಡಲು ತಮ್ಮ ಅನುಮೋದನೆಯನ್ನು ಘೋಷಿಸಿದರು.

6. ಈ ಭೇಟಿಯು ಭಾರತೀಯ ಸಮುದಾಯದೊಂದಿಗೆ ಸಂವಾದ ಮತ್ತು ಭಾರತೀಯ ಉದ್ಯಮಿಗಳೊಂದಿಗಿನ ಅಧಿವೇಶನವನ್ನು ಒಳಗೊಂಡಿತ್ತು. ವಿದೇಶಾಂಗ ವ್ಯವಹಾರಗಳು ಮತ್ತು ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರು ವಿಶ್ವಸಂಸ್ಥೆಯ ಮಿಷನ್ ಅಡಿಯಲ್ಲಿರುವ ಸೇನಾ ಕ್ಷೇತ್ರ ಆಸ್ಪತ್ರೆಗೆ, ಬಿಎಪಿಎಸ್ ಹಿಂದೂ ದೇವಾಲಯ ಮತ್ತು ಡಾಟರ್ಸ್ ಆಫ್ ಮೇರಿ ಇಮ್ಯಾಕ್ಯುಲೇಟ್ (ಭಾರತೀಯ ಧಾರ್ಮಿಕ ಸಭೆ) ಆವರಣಕ್ಕೂ ಸಹ ಭೇಟಿ ನೀಡಿದರು. ದಕ್ಷಿಣ ಸುಡಾನ್‌ನಲ್ಲಿರುವ ಭಾರತೀಯ ಸಮುದಾಯವು ಸಚಿವರನ್ನು ಪೂರ್ಣಹೃದಯದಿಂದ ಸ್ವಾಗತಿಸಿದರು ಮತ್ತು ಹಲವು ವರ್ಷಗಳ ನಂತರ ಭಾರತೀಯ ಸಚಿವರನ್ನು ಸ್ವಾಗತಿಸಲು ಉತ್ಸುಕರಾಗಿದ್ದರು.

7. ವಿದೇಶಾಂಗ ವ್ಯವಹಾರಗಳ ಮತ್ತು ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರ ದಕ್ಷಿಣ ಸುಡಾನ್‌ಗೆ ಭೇಟಿ ನೀಡಿರುವುದು ದ್ವಿಪಕ್ಷೀಯ ಸಂಬಂಧಗಳಿಗೆ ಉತ್ತೇಜನ ನೀಡುವ ಐತಿಹಾಸಿಕ ಬೆಳವಣಿಗೆಯಾಗಿದೆ.

**ನವ ದೆಹಲಿ**
**ಅಕ್ಟೋಬರ್ 25, 2021**

DISCLAIMER: This is an approximate translation. The original is available in English on MEA’s website and may be referred to as the official press release.